# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

ಸಂಪುಟ : VIII ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ-ಮಾರ್ಚ್ : 2024


## ಅಧ್ಯಕ್ಷರ ಮಾತು

### ಕೃತಜ್ಞತೆಗಳು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2023-24ನೇ ಸಾಲಿನಲ್ಲಿ ಒಟ್ಟು ವ್ಯವಹಾರದಲ್ಲಿ ಅತ್ಯುಜ್ವಲ ಪ್ರಗತಿಯೊಂದಿಗೆ ರೂ.151 ಕೋಟಿ ಹೆಚ್ಚಳವನ್ನು ಸಾಧಿಸಿದೆ. ವರ್ಷಾಂತ್ಯ 31.03.2024ಕ್ಕೆ ಠೇವಣಾತಿಯು ರೂ.533 ಕೋಟಿ ಹಾಗೂ ಸಾಲ ರೂ.453 ಕೋಟಿಯೊಂದಿಗೆ ರೂ.986 ಕೋಟಿಯಾಗಿ, ನಿಗದಿತ ಗುರಿ (ರೂ.985 ಕೋಟಿ)ಯನ್ನು ದಾಟಿ ತನ್ನ Vision-2025 ನಂತೆ 31.03.2025ಕ್ಕೆ ರೂ.1000 ಕೋಟಿ ಒಟ್ಟು ವ್ಯವಹಾರದ ಗುರಿಯನ್ನು ಅತೀ ಶೀಘ್ರದಲ್ಲಿ ಸಾಧಿಸುವತ್ತ ದೃಢ ಹೆಜ್ಜೆಯನ್ನಿಟ್ಟಿದೆ ಎಂದು ತಿಳಿಸಲು ನಾನು ತುಂಬಾ ಹರ್ಷಪಡುತ್ತೇನೆ.

31.03.2024ಕ್ಕೆ ಠೇವಣಾತಿಯು ಹಿಂದಿನ ಸಾಲಿಗಿಂತ ರೂ.80 ಕೋಟಿ ಹೆಚ್ಚಳಗೊಂಡು ಶೇ.18ರಷ್ಟು ವೃದ್ಧಿ ಹಾಗೂ ಸಾಲವು ರೂ.71 ಕೋಟಿ ಹೆಚ್ಚಳಗೊಂಡು ಶೇ.19 ರಷ್ಟು ವೃದ್ಧಿಯನ್ನು ಕಂಡಿರುತ್ತದೆ. ಒಟ್ಟು ವ್ಯವಹಾರ ರೂ.151 ಕೋಟಿ ಹೆಚ್ಚಳಗೊಂಡು ಶೇ.18 ವೃದ್ಧಿಯಾಗಿ ಸಂಘವು ಅತ್ಯುತ್ತಮ ಪ್ರಗತಿಯನ್ನು ಕಂಡಿದೆ. 2022-23ನೇ ಸಾಲಿನಲ್ಲಿ ಮಾಡಿರುವ ರೂ.3089 ಕೋಟಿ ವಾರ್ಷಿಕ ವಹಿವಾಟು (Turnover), 2023-24ನೇ ಸಾಲಿನಲ್ಲಿ ರೂ.4000 ಕೋಟಿ ದಾಟಿದೆ.

ಸಂಘವು 31.03.2024ಕ್ಕೆ ಕಳೆದ ಸಾಲಿಗಿಂತ ಶೇ.22 ವೃದ್ಧಿಯೊಂದಿಗೆ ರೂ.12 ಕೋಟಿ ಮೀರಿದ ನಿವ್ವಳ ಲಾಭ (ಗುರಿ ರೂ.10 ಕೋಟಿ), Gross NPA 0.07% ಮಾತ್ರವಲ್ಲದೆ ಕಳೆದ 16 ವರ್ಷಗಳಿಂದ 0% ನಿವ್ವಳ ಅನುತ್ಪಾದಕ ಆಸ್ತಿಯೊಂದಿಗೆ, ತನ್ನ ಎಲ್ಲಾ ಕಾರ್ಯ ವೈಖರಿಯಲ್ಲಿ ಗುರಿ ಮೀರಿದ ಪ್ರಗತಿಯೊಂದಿಗೆ ಅಮೋಘ ಸಾಧನೆಯನ್ನು ಮಾಡಿದೆ.

## 31.03.2024ಕ್ಕೆ ಸಂಘದ ಸಾಧನೆಯ ಪಕ್ಷಿನೋಟ (ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು)

| ಕ್ರ ಸಂ. | ಕಾರ್ಯ ವಿಭಾಗ | ಮಾರ್ಚ್ 2023ಕ್ಕೆ ಇದ್ದಂತೆ (ರೂ) | 31.03.2024ಕ್ಕೆ ಗುರಿ (ರೂ) | ಮಾರ್ಚ್2024ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|---|
| 1 | ಠೇವಣಾತಿಗಳು | ರೂ.453 ಕೋಟಿ | ರೂ.535 ಕೋಟಿ | ರೂ.533 ಕೋಟಿ | ರೂ.80 ಕೋಟಿ | 18% |
| 2 | ಸಾಲ ಮತ್ತು ಮುಂಗಡ | ರೂ.382 ಕೋಟಿ | ರೂ.450 ಕೋಟಿ | ರೂ.453 ಕೋಟಿ | ರೂ.71 ಕೋಟಿ | 19% |
| 3 | ಒಟ್ಟು ವ್ಯವಹಾರ | ರೂ.835 ಕೋಟಿ | ರೂ.985 ಕೋಟಿ | ರೂ.986 ಕೋಟಿ | ರೂ.151 ಕೋಟಿ | 18% |
| 4 | ನಿವ್ವಳ ಲಾಭ | ರೂ.9.84 ಕೋಟಿ | ರೂ.10.22 ಕೋಟಿ | ರೂ.12 ಕೋಟಿ | ರೂ.2.16 ಕೋಟಿ | 22% |
| 5 | ಶೇಕಡಾವಾರು ಅನುತ್ಪಾದಕ ಆಸ್ತಿ | 0.08% | 0.10% | 0.07% | - | - |
| 6 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | Nil | - | - |

**2023-24ನೇ ಸಾಲಿನವರೆಗಿನ ಸಂಘದ ಸಾಧನೆಯ ವಿಶೇಷತೆಗಳು**

- 2023-24 ಸಾಲಿನಲ್ಲಿ ಸಾರ್ವಕಾಲಿಕ ದಾಖಲೆಯ ರೂ.151 ಕೋಟಿ ವ್ಯವಹಾರ ಹೆಚ್ಚಳ.
- ಸ್ಥಾಪನೆ 30ನೇ ವರ್ಷದಲ್ಲಿ ರೂ.986 ಕೋಟಿ ಒಟ್ಟು ವ್ಯವಹಾರ (ಠೇವಣಿ ರೂ.533 ಕೋಟಿ + ಸಾಲ ರೂ.453 ಕೋಟಿ) ದಾಖಲಿಸಿದ ಅವಿಭಜಿತ ದ.ಕ ಮತ್ತು ಉಡುಪಿ ಜಿಲ್ಲೆಯ ಪ್ರಥಮ ಕ್ರೆಡಿಟ್ ಸಹಕಾರ ಸಂಘ.
- 30.06.2024ಕ್ಕೆ ರೂ.1000 ಕೋಟಿ ವ್ಯವಹಾರವನ್ನು ಸಾಧಿಸುವ ಗುರಿ.
- ದಿನಾಂಕ 31.03.2024ಕ್ಕೆ ಸಂಘದ ನಿವ್ವಳ ಲಾಭ ರೂ.12 ಕೋಟಿಯೊಂದಿಗೆ ಶೇ.22 ವೃದ್ಧಿ, ಹಿಂದಿನ ಸಾಲಿಗಿಂತ ರೂ.2.16 ಕೋಟಿ ಹೆಚ್ಚಳ. ಲಾಭ ಗಳಿಕೆಯಲ್ಲಿ ನಿರಂತರ ಪ್ರಗತಿ.
- Gross NPA ಹೊರಬಾಕಿ ಸಾಲದ 0.07% ಕ್ಕೆ ಸೀಮಿತ.
- ಕಳೆದ 16 ವರ್ಷಗಳಿಂದ ಅಂದರೆ 2008 ರಿಂದ ಸಂಘದ ನಿವ್ವಳ ಅನುತ್ಪಾದಕ ಆಸ್ತಿಯು ಹೊರಬಾಕಿ ಸಾಲದ ಶೂನ್ಯ ಪ್ರಮಾಣ (0% NPA)ದಲ್ಲಿರುತ್ತದೆ.
- ಸಂಘದ ಕಾರ್ಯವ್ಯಾಪ್ತಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟು 25 ಶಾಖೆಗಳನ್ನು ಹೊಂದಿ ಸದಸ್ಯರ ಸೇವೆಯಲ್ಲಿ ಕಳೆದ 30 ವರ್ಷಗಳಿಂದ ಯಶಸ್ವಿಯಾಗಿ ನಿರತವಾಗಿದೆ. ವಿಶನ್ 2025 ರಂತೆ 30 ಶಾಖೆಗಳನ್ನು ಹೊಂದುವ ಗುರಿ.
- 36000 ಚ.ಅ. ವಿಸ್ತೀರ್ಣದ ಸುಸಜ್ಜಿತ ಕೇಂದ್ರ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್ 2024ರ ವರ್ಷಾಂತ್ಯಕ್ಕೆ ಲೋಕಾರ್ಪಣೆ.

2023-24ನೇ ಸಾಲಿನ ವರ್ಷಾಂತ್ಯ 31.03.2024ಕ್ಕೆ ಸಂಘವು ಸಾಧಿಸಿರುವ ಗುರಿ ಮೀರಿದ, ಸಾರ್ವಕಾಲಿಕ ದಾಖಲೆಯ ಪ್ರಗತಿಗೆ ಸಹಕರಿಸಿದ, ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ, ಎಲ್ಲಾ ಠೇವಣಿದಾರ ಸಾಲಗಾರ ಸದಸ್ಯ ಬಾಂಧವರಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ನನ್ನ ವಿಶೇಷ ಧನ್ಯವಾದಗಳು. ತಮ್ಮ ಸೇವಾ ದಕ್ಷತೆ ಮತ್ತು ಪರಿಶ್ರಮದಿಂದ ಸಂಘದ ಈ ಪ್ರಗತಿ ಕೊಡುಗೆಯನ್ನು ನೀಡಿದ ಸಂಘದ ಸಿಬ್ಬಂದಿಗಳಿಗೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ Vision 2025ರ ಗುರಿಯನ್ನು ಮುಂದಿನ ವರ್ಷದಲ್ಲಿ ಸಾಧಿಸುವ ಭರವಸೆಯನ್ನು ವ್ಯಕ್ತಪಡಿಸುತ್ತಾ ಎಲ್ಲರಿಗೂ ವಿಷು ಹಬ್ಬದ ಶುಭಾಶಯಗಳನ್ನು ಸಲ್ಲಿಸುತ್ತಾ ಬರುವ ಹೊಸ ವಿತ್ತೀಯ ವರ್ಷ 2024-25 ತಮಗೆಲ್ಲರಿಗೂ ಶುಭಕರವಾಗಲೆಂದು ಹಾರೈಸುತ್ತೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ಅಭಿನಂದನೆಗಳು



ಪ್ರತಿಷ್ಠಿತ, ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಇದರ ಅಧ್ಯಕ್ಷರಾಗಿ ಸತತ ಏಳನೇ ಅವಧಿಗೆ ಅವಿರೋಧವಾಗಿ ಪುನರಾಯ್ಕೆಯಾದ ಸಹಕಾರ ರತ್ನ ಡಾ। ಎಂ.ಎನ್.ರಾಜೇಂದ್ರಕುಮಾರ್‌ರವರನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಅಭಿನಂದಿಸಿದ ಸಂದರ್ಭ.

## ಹುಟ್ಟುಹಬ್ಬದ ಶುಭಾಶಯಗಳು



ದಿನಾಂಕ 24.02.2024ರಂದು ತನ್ನ 75ನೇ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷರಾದ ಸಹಕಾರ ರತ್ನ ಡಾ। ಎಂ.ಎನ್. ರಾಜೇಂದ್ರಕುಮಾರ್ ರವರನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಅಭಿನಂದಿಸಿ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದ ಸಂದರ್ಭ.

## ಸಹಕಾರ ಸಂಘಗಳ ಜಂಟಿ ನಿಬಂಧಕರು ಸಂಘದ ಕೇಂದ್ರ ಕಛೇರಿಗೆ ಭೇಟಿ ನೀಡಿದ ಸಂದರ್ಭ



ದಿನಾಂಕ 03.02.2024 ರಂದು ಸಂಘದ ಕೇಂದ್ರ ಕಛೇರಿಗೆ ಶ್ರೀ ಸಿ. ಪ್ರಸಾದ್ ರೆಡ್ಡಿ ಕೆಸಿಎಸ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು ಭೇಟಿ ನೀಡಿದರು. ಇವರನ್ನು ಸಂಘದ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ರವರು ಹಾಗೂ ಸಹಾಯಕ ಮಹಾ ಪ್ರಬಂಧಕರಾದ ಶ್ರೀ ಮೋಹನ್‌ದಾಸ್ ಶೆಟ್ಟಿಯವರು ಆತ್ಮೀಯವಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಂಗಳೂರು ಉಪವಿಭಾಗ ಶ್ರೀ ಸುಧೀರ್‌ಕುಮಾರ್ ಮತ್ತು ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ಅಧೀಕ್ಷಕರಾದ ಶ್ರೀ ಗೋಪಾಲ್‌ರವರು ಉಪಸ್ಥಿತರಿದ್ದರು.

## ಅಭಿನಂದನೆಗಳು



ಪ್ರತಿಷ್ಠಿತ, ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಇದರ ನಿರ್ದೇಶಕರಾಗಿ ಸತತ ಎರಡನೇ ಬಾರಿಗೆ ಚುನಾಯಿತರಾದ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರನ್ನು ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿದ ಸಂದರ್ಭ



ದಕ್ಷಿಣ ಕನ್ನಡ ಜಿಲ್ಲಾ ಅಡಿಕೆ ಬೆಳೆಗಾರರ ಸಂಘ (MASS) ಇದರ ಅಧ್ಯಕ್ಷರಾಗಿ ಚುನಾಯಿತರಾದ ಸಂಘದ ನಿರ್ದೇಶಕರಾದ ಸವಣೂರು ಶ್ರೀ ಕೆ. ಸೀತಾರಾಮ ರೈಯವರನ್ನು ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿದ ಸಂದರ್ಭ

## ಶುಭಾಶಯಗಳು



ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧಕ್ಷರಾಗಿ ಕರ್ನಾಟಕ ಸರಕಾರದಿಂದ ನೇಮಕಗೊಂಡು ಅಧಿಕಾರ ವಹಿಸಿಕೊಂಡ ಮಂಗಳೂರಿನ ಪ್ರಖ್ಯಾತ ನ್ಯಾಯವಾದಿ, ರಾಜಕೀಯ, ಸಹಕಾರಿ ದುರೀಣರಾದ ಶ್ರೀ ಸದಾಶಿವ ಉಳ್ಳಾಲ್‌ರವರನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಅಭಿನಂದಿಸಿ ಶುಭಾಶಯಗಳನ್ನು ಕೋರಿದ ಸಂದರ್ಭ.

## ದಿನಾಂಕ 25.01.2024ರಂದು ವೆನ್ಲಾಕ್ ಆಸ್ಪತ್ರೆಯ ಲಯನ್ಸ್ ಆರ್ಟಿಫಿಶಿಯಲ್ ಲಿಂಬ್ ಸೆಂಟರ್‌ನಲ್ಲಿ ಸಂಘದ ವತಿಯಿಂದ ದೈಹಿಕ ವಿಕಲಚೇತನರಿಗೆ ಕೃತಕ ಅಂಗ ನೀಡಿಕೆಗೆ ಸಹಾಯಧನ



ಸಂಘದ ಮಾನವೀಯ ಕಳಕಳಿಯ ಸೇವೆಗಳ ಅಂಗವಾಗಿ, ಲಯನ್ಸ್‌ಕ್ಲಬ್ ಇಂಟರ್‌ನೇಶನಲ್, ಡಿಸ್ಟ್ರಿಕ್ಟ್ 317ಡಿನ ಲಯನ್ಸ್ ಆರ್ಟಿಫೀಶಿಯಲ್ ಲಿಂಬ್ ಸೆಂಟರ್‌ನಲ್ಲಿ ದೈಹಿಕ ವಿಕಲ ಚೇತನರಿಗೆ ಕೃತಕ ಅಂಗ ವಿತರಣೆಗೆ ಸಹಾಯ ಧನವನ್ನು ನೀಡಲಾಯಿತು. ಇತ್ತೀಚೆಗೆ ವೆನ್ಲಾಕ್ ಆಸ್ಪತ್ರೆಯ ಲಯನ್ಸ್ ಆರ್ಟಿಫೀಶಿಯಲ್ ಲಿಂಬ್ ಸೆಂಟರ್‌ನಲ್ಲಿ ಜರಗಿದ ಕಾರ್ಯಕ್ರಮದಲ್ಲಿ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ಲಯನ್ಸ್ ಸೆಂಟರ್ ಫಾರ್ ದಿ ಫಿಸಿಕಲ್ ಹ್ಯಾಂಡಿ ಕ್ಯಾಪ್ಡ್ ಇದರ ಅಧ್ಯಕ್ಷರಾದ ಖ್ಯಾತ ಎಲುಬು ತಜ್ಞ ಡಾ। ಎಂ. ಶಾಂತಾರಾಮ ಶೆಟ್ಟಿ, ಲಯನ್ಸ್‌ಕ್ಲಬ್‌ನ ಪ್ರಾದೇಶಿಕ ಅಧ್ಯಕ್ಷರಾದ ಶ್ರೀ ಚಂದ್ರಹಾಸ ರೈ, ಲಯನ್ಸ್‌ಕ್ಲಬ್‌ನ ಪದಾಧಿಕಾರಿಗಳಾದ ಎಡ್ವಕೇಟ್ ಶ್ರೀ ಅರುಣ್‌ಕುಮಾರ್ ಶೆಟ್ಟಿ, ಶ್ರೀಮತಿ ರಮ್ಯಾ ಸಿ. ರೈ, ಶ್ರೀ ವಿಜಯವಿಷ್ಣು ಮಯ್ಯ, ಶ್ರೀ ಎಚ್. ಗುರುಪ್ರೀತ್ ಆಳ್ವ ಮುಂತಾದ ಗಣ್ಯರ ಉಪಸ್ಥಿತಿಯಲ್ಲಿ ದೈಹಿಕ ವಿಕಲಚೇತನರಿಗೆ ಕೃತಕ ಅಂಗ ವಿತರಣೆಯನ್ನು ಮಾಡಿದರು.

## ದಿನಾಂಕ 21.01.2024ರಂದು ಜರಗಿದ ಸಹಕಾರಿ ಕ್ರೀಡೋತ್ಸವದಲ್ಲಿ ಸಂಘವು ಭಾಗವಹಿಸಿದ ಸಂದರ್ಭ




ದಿನಾಂಕ 21.01.2024ರಂದು ಸಹಕಾರ ಭಾರತಿ ಇವರ ಆಶ್ರಯದಲ್ಲಿ ಜರಗಿದ ಸಹಕಾರಿ ಕ್ರೀಡೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಂದರ್ಭ.



ಸಹಕಾರ ಭಾರತಿ ಮಂಗಳೂರು ಇವರ ಆಶ್ರಯದಲ್ಲಿ ಜರಗಿದ ಸಹಕಾರಿ ಕ್ರೀಡೋತ್ಸವದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ವಿಜೇತರಾದ ಸಂಘದ ಸಿಬ್ಬಂದಿಗಳು ಮತ್ತು ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾದ ಸಿಬ್ಬಂದಿಗಳ ಮಕ್ಕಳು.

# ದಿನಾಂಕ 07.01.2024ರಂದು ಜರಗಿದ ಸಂಘದ ಸರ್ವ ಸಿಬ್ಬಂದಿಗಳ ಸಭೆ






ದಿನಾಂಕ 07.01.2024 ರಂದು ಸಂಘದ ಸರ್ವ ಸಿಬ್ಬಂದಿಗಳ ಸಭೆಯನ್ನು ಜರಗಿಸಲಾಯಿತು, ಸಭೆಯ ಅಧ್ಯಕ್ಷತೆಯನ್ನು ಸಂಘದ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ವಹಿಸಿದ್ದರು. ಸಂಘದ ನಿರ್ದೇಶಕರುಗಳಾದ ಶ್ರೀ ಕೆ. ಸೀತಾರಾಮ ರೈ ಸವಣೂರು, ಶ್ರೀ ಎಂ. ರಾಮಯ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ಕುಂಬ್ರ ದಯಾಕರ ಆಳ್ವರವರು ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಸಂಘದ ಎಲ್ಲಾ 25 ಶಾಖೆಗಳ ಶಾಖಾ ವ್ಯವಸ್ಥಾಪಕರುಗಳು ಮತ್ತು ಸಿಬ್ಬಂದಿಗಳೊಂದಿಗೆ ಹಾಗೂ ಕೇಂದ್ರ ಕಛೇರಿ ಸಿಬ್ಬಂದಿಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಿ, 31.03.2024ಕ್ಕೆ ಸಂಘವು ಸಾಧಿಸಬೇಕಾದ ಗುರಿ ಸಾಧನೆ ಬಗ್ಗೆ ಸಿಬ್ಬಂದಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಯಿತು.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀಮತಿ ನಿರ್ಮಲ ಶೆಟ್ಟಿ | ಹೆಬ್ರಿ | ಶ್ರೀ ಭರತ್ ಎಸ್. | ಶಿರ್ವ |
| ಶ್ರೀಮತಿ ತುಳಸಿ | ಸುರತ್ಕಲ್ | ಶ್ರೀ ಅಖಿಲ್ ರೈ ಬಿ.ಕೆ. | ಚಿಲಿಂಬಿ |
| ಶ್ರೀಮತಿ ಸ್ವಪ್ನ ಬಿ. | ತೊಕ್ಕೊಟ್ಟು | ಶ್ರೀಮತಿ ವಿಧಿಶಾ | ಉಪ್ಪಿನಂಗಡಿ |
| ಕು. ಅಕ್ಷತ ಕುಮಾರಿ | ಚಿಲಿಂಬಿ | ಶ್ರೀಮತಿ ಅಶ್ವಿನಿ | ಉಡುಪಿ |
| ಕು. ಶ್ರುತಿ ಕೆ. | ಬಿ.ಸಿ.ರೋಡ್ | ಶ್ರೀ ಮೋಹನ್‌ದಾಸ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀಮತಿ ಲಾವಣ್ಯ | ಉಡುಪಿ ನಗರ | ಶ್ರೀ ಸೇಸಪ್ಪ ನ್ಯಾಕ್ | ಸುಳ್ಯ |
| ಕು. ಅಶ್ವಿತಾ ಎಂ. | ಕಡಬ | ಶ್ರೀಮತಿ ಉಷಾ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀ ಬಾಲಕೃಷ್ಣ ರೈ | ಬಿ.ಸಿ.ರೋಡ್ | ಶ್ರೀ ರಾಘವೇಂದ್ರ ರಾವ್ | ಉಡುಪಿ ನಗರ |
| ಶ್ರೀ ಶ್ರೀಹರ್ಷ ಡಿಎಸ್. | ಬಿ.ಸಿ.ರೋಡ್ | ಶ್ರೀಮತಿ ಶ್ರೀಲತಾ ಶೆಟ್ಟಿ | ಬೈಂದೂರು |
| ಶ್ರೀಮತಿ ಜ್ಯೋತಿ | ಕೇಂದ್ರ ಕಛೇರಿ | ಶ್ರೀ ಕುಂಞ | ಬೆಳ್ತಂಗಡಿ |
| ಶ್ರೀಮತಿ ಅನಿತಾ ಎ. | ವೆಲೆನ್ಸಿಯಾ | ಶ್ರೀ ಮಹಾಬಲ ಶೆಟ್ಟಿ | ಮಂಗಳೂರು |
| ಶ್ರೀ ಕರುಣಾಕರ್ ಶೆಟ್ಟಿ | ಸುಳ್ಯ | ಶ್ರೀ ರಮೇಶ್ ಪಿ | ತೊಕ್ಕೊಟ್ಟು |
| ಶ್ರೀ ಗಣೇಶ್ ಜಿ.ಕೆ. | ಕೇಂದ್ರ ಕಛೇರಿ | ಶ್ರೀಮತಿ ಉಷಾ ಬಿ. | ಉಪ್ಪಿನಂಗಡಿ |
| ಶ್ರೀಮತಿ ಜಯಂತಿ ಖಾರ್ವಿ | ಕುಂದಾಪುರ | ಶ್ರೀ ಹರೀಶ್ ಮೂಲ್ಯ | ವಿಟ್ಲ |
| ಶ್ರೀ ಸೂರಜ್ ಭಂಡಾರಿ | ಸುರತ್ಕಲ್ | ಶ್ರೀ ನವೀನ್‌ಕುಮಾರ್ | ಕಾರ್ಕಳ |
| ಶ್ರೀ ಮೋಹನ್‌ದಾಸ್ ಶೆಟ್ಟಿ | ಉಪ್ಪಿನಂಗಡಿ | ಶ್ರೀ ನಾಗರಾಜ್ | ಕುಂದಾಪುರ |
| ಶ್ರೀಮತಿ ಮಿಸ್ರಿಯ ಪಿ.ಐ. | ಉಪ್ಪಿನಂಗಡಿ | ಶ್ರೀ ನಾಗರಾಜ್‌ಎಚ್ | ಬೈಂದೂರು |
| ಶ್ರೀ ಶಮಿತ್‌ಕುಮಾರ್ | ಹಂಪನಕಟ್ಟೆ | ಶ್ರೀಮತಿ ನಿಶ್ಮಿತಾ | ಮುಲ್ಕಿ |

## ಅಭಿನಂದನೆಗಳು

- ಸಂಘದ ಶಿರ್ವ ಶಾಖೆಯ ಸಿಬ್ಬಂದಿ ಶ್ರೀ ಭರತ್‌ಎಸ್. ರವರ ಹೊಸ ಮನೆ "ನಂದಾದೀಪ" ಇದರ ಗೃಹಪ್ರವೇಶವು ಇತ್ತೀಚೆಗೆ ಜರಗಿತು. ಶ್ರೀ ಭರತ್‌ಎಸ್. ರವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಕುಂದಾಪುರ ಶಾಖೆಯ ಸಿಬ್ಬಂದಿ ಶ್ರೀ ಸಂತೋಷ ಶೆಟ್ಟಿರವರ ಹೊಸ ಮನೆ "ಶ್ರೀ ಬೃಂದಾವನ" ಇದರ ಗೃಹಪ್ರವೇಶವು ಇತ್ತೀಚೆಗೆ ಜರಗಿತು. ಶ್ರೀ ಸಂತೋಷ ಶೆಟ್ಟಿರವರಿಗೆ ಹಾರ್ದಿಕ ಅಭಿನಂದನೆಗಳು.

ಇವರಿಗೆ ಹಾರ್ದಿಕ ಅಭಿನಂದನೆಗಳು.

Private Circulation only

**BOOK POST**

To ..........................................................................

..........................................................................

..........................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.